ಕೆಲಸ ಕಾರ್ಯಗಳ ನಿಗಾ ವಹಿಸಿದ್ದಾರೆ. ಸಂಘದ ಖರ್ಚು-ವೆಚ್ಚಗಳ ಪಟ್ಟಿಯನ್ನು ಅವರು ಈಗಲೂ ಜತನದಿಂದ ಕಾಪಾಡಿಕೊಂಡಿರುವುದು ಅವರ ಪಾರದರ್ಶಕ ವ್ಯಕ್ತಿತ್ವಕ್ಕೆ ಸಂಕೇತವಾಗಿದೆ. ಹಟ್ಟಿಯ ಶಾಲೆಗೆ ನಿವೇಶನದ ಸಮಸ್ಯೆ ಬಂದಾಗ ತಮ್ಮ ಸ್ವಂತ ನಿವೇಶನವನ್ನೇ ಉಚಿತವಾಗಿ ಕೊಟ್ಟುಬಿಡುತ್ತಾರೆ. ಸರ್ಕಾರಿ ಸಂಬಳದ ನೌಕರಿಯಲ್ಲಿದ್ದ ಅವರು ಇತರರಂತೆ ಎಲ್ಲಾದರೂ ಒಳ್ಳೆಯ ಬಡಾವಣೆಗಳಲ್ಲಿ ಮನೆ ಕಟ್ಟಿಸಿಕೊಂಡು 'ಸುಖ ಜೀವನ' ನಡೆಸಬಹುದಿತ್ತು. ದೊರೈರಾಜ್ ತನ್ನವರೆಲ್ಲರನ್ನೂ ಸದಾಕಾಲ ಆತುಕೊಂಡಿರಲು ಬಯಸುವ ಓರ್ವ ಅಪ್ಪಟ ಹಟ್ಟಿಗ! ಅದು ಅವರ ಮಡದಿಯ ಸಹಕಾರವಿಲ್ಲದೆ ಸಾಗಲು ಸಾಧ್ಯವೇ ಇರಲಿಲ್ಲ. ಅವರನ್ನೂ ಹೋರಾಟದ ಸಾಗರಕ್ಕೆ ಧುಮುಕಿಸಿದ್ದಾರೆ.

ಎಲ್ಲಕ್ಕಿಂತ ಹೆಚ್ಚು ಮಹತ್ವದ ಸಂಗತಿಯೆಂದರೆ ಹಟ್ಟಿಯ ಎಲ್ಲ ಮಹಿಳೆಯರು ಎಲ್ಲ ರೀತಿಯ ಸಾಮಾಜಿಕ, ಸಾಂಸ್ಕೃತಿಕ ಚಳವಳಿಗಳಲ್ಲೂ ತಮ್ಮ ಹಸಿವು, ಬಡತನ ಕಷ್ಟಕಾರ್ಪಣ್ಯಗಳನ್ನು ಬದಿಗೊತ್ತಿ ಭಾಗವಹಿಸಿದ್ದಾರೆ. ಆ ಎಲ್ಲ ವಿವರಗಳು ಈ ಕೃತಿಯಲ್ಲಿವೆ. ಹಲವಾರು ಮಹಿಳೆಯರ ಮನದಾಳದ ಮಾತುಗಳು ಇಲ್ಲಿ ದಾಖಲಾಗಿವೆ. ಜಿ.ವಿ. ಆನಂದಮೂರ್ತಿ ಅಭಿಪ್ರಾಯ ಪಡುವಂತೆ, ಇಲ್ಲಿನ ಎಲ್ಲ ಮಹಿಳೆಯರು ತಮ್ಮ ಹಟ್ಟಿಯ ಘನತೆಯನ್ನು, ಕ್ಷೇಮವನ್ನು, ರಕ್ಷಣೆಯನ್ನು, ಪರಸ್ಪರ ಸಹಕಾರವನ್ನು ಒಳಗಿನಿಂದಲೇ ಆಂತರಿಕವಾಗಿ ಕಾಪಾಡಿಕೊಂಡರೆ, ಪುರುಷರು ಅದೆಲ್ಲವನ್ನೂ ಹೊರಗಿನಿಂದ ಬರುವ ಅಡ್ಡಿ ಆತಂಕಗಳನ್ನು ಎದುರಿಸುತ್ತಾ ಹಟ್ಟಿಯ ಘನತೆಯನ್ನು ಕಾಪಾಡುತ್ತಾರೆ.

ಕೃತಿಯಲ್ಲಿ ಸ್ವಾರಸ್ಯಕರ ಪ್ರಸಂಗಗಳನೇಕ ದಾಖಲಾಗಿವೆ. ಹಳೇಹಟ್ಟಿಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲೇ ಇದ್ದ ಒಂದು ಮಿಷನರಿ ಸ್ಕೂಲಿನಲ್ಲಿ ಒಂದು 'ಸ್ನಾನ'ದ ಕೊಠಡಿ ಇತ್ತಂತೆ. ಶಾಲೆಗೆ ಬಂದಕೂಡಲೇ ಎಲ್ಲ ಮಕ್ಕಳು ತಮ್ಮ ಬಟ್ಟೆಗಳನ್ನು ಕಳಚಿಟ್ಟು, ಸ್ನಾನ ಮಾಡಿ, ಶಾಲೆಯ ಬಟ್ಟೆಗಳನ್ನು ಧರಿಸಿ ಪಾಠ ಕೇಳಬೇಕು. ಶಾಲೆ ಮುಗಿದ ನಂತರ ಶಾಲೆಯ ಬಟ್ಟೆಗಳನ್ನು ಕಳಚಿಟ್ಟು ತಮ್ಮ ಬಟ್ಟೆಗಳನ್ನು ಹಾಕಿಕೊಂಡು ತಮ್ಮ ಮನೆಗಳಿಗೆ ಹೋಗಬೇಕು! ಶೂ ಮೇಕರ್ ನರಸಿಂಹಯ್ಯನವರು ತಮ್ಮ ತಂದೆ ಅಂಕಯ್ಯನವರ ಶೂ ಮಾಡುವ ಕೌಶಲದ ಬಗ್ಗೆ ತಿಳಿಸುತ್ತಾರೆ. ಅವರು ಹೊಲಿಯುತ್ತಿದ್ದ ಶೂಗಳು ಆಗ್ಗೆ ತುಮಕೂರಿನಲ್ಲಿದ್ದ 'ಬಾಟಾ' ಅಂಗಡಿಯ ಮೂಲಕ ಕೊಲ್ಕತ್ತಾದ 'ಬಾಟಾ ಕಂಪನಿ'ಯವರೆಗೂ ತಲುಪುತ್ತಿದ್ದವಂತೆ. ಅವರ ಕೌಶಲ ಮೆಚ್ಚಿ ಅವರನ್ನು ಕೊಲ್ಕತ್ತಾಗೆ ಆಹ್ವಾನಿಸಿ ಕಂಪನಿ ರೈಲಿನ ಟಿಕೆಟ್‌ಗಳನ್ನು ಕಳಿಸಿತ್ತಂತೆ. "ಆದರೆ ತುಮಕೂರಿನ ಬಾಟಾ ಅಂಗಡಿಯ ಮಾಲೀಕರು, ಅಂಕಯ್ಯ ಹೋದರೆ ನನ್ನ ಅಂಗಡಿ ಮುಚ್ಚಬೇಕಾಗುತ್ತದೆ ಎಂದು ತಿಳಿದು, ನಮ್ಮ ತಂದೆಗೆ, 'ನೀನು ಅಲ್ಲಿಗೆ ಹೋದರೆ, ಅವರು ನಿನ್ನಿಂದ ಕೆಲಸ ಮಾಡಿಸಿಕೊಂಡು ಕೊನೆಗೆ ನಿನ್ನ ಕೈಯನ್ನು ಕಡಿದುಹಾಕುತ್ತಾರೆ. ಸಾಯೋವರೆಗೂ ನೀನು ಅಲ್ಲಿಯೇ ಇರಬೇಕಾಗುತ್ತದೆ' ಎಂದು ಇಲ್ಲದ ಭಯ ತೋರಿಸಿ ಹೆದರಿಸಿದರು.'' ಇದು ಶೋಷಣೆಯ ಇನ್ನೊಂದು ದುಷ್ಟ ಮುಖ. ಹೋರಾಟದ ಜೊತೆಯಲ್ಲಿದ್ದ ಅನೇಕರ ಸ್ವಾನುಭವ ನಿರೂಪಣೆಗಳು ಇಲ್ಲಿವೆ. ದೊರೈರಾಜ್ ಅವರೇ ಸಂದರ್ಶನದ ರೀತಿಯಲ್ಲಿ ಅವರೆಲ್ಲರನ್ನೂ ಮಾತಾಡಿಸಿದ್ದಾರೆ. ಕೆಲವು ಘಟನೆಗಳು ಮತ್ತು ಅವರೆಲ್ಲರೂ ದೊರೈರಾಜ್ ಬಗೆಗೆ ತಳೆದಿರುವ ಪ್ರೀತಿವಿಶ್ವಾಸದ ಮಾತುಗಳು ಕೆಲವೊಮ್ಮೆ ಪುನರಾವರ್ತನೆ ಎನಿಸುತ್ತವೆ. ಅದು ಸಹಜ, ಆದರೆ ಕೆಲವು ಘಟನೆಗಳನ್ನು ದೃಢೀಕರಿಸುವುದರಿಂದ ಪುರಾವರ್ತನೆಗಳು ಅಡ್ಡಿಯೆನಿಸುವುದಿಲ್ಲ.

ಮುಸಿಯಮ್ಮ ಎಂಬುವರ ಮಾತುಗಳು ಹಟ್ಟಿಯ ಹೋರಾಟದ ಗರ್ಭದಲ್ಲಿ ಅಡಗಿರುವ ನೋವನ್ನು, ಆತ್ಮವಿಶ್ವಾಸವನ್ನು ತೆರೆದಿಡುತ್ತವೆ. ಗಾರೆ ಕೆಲಸದ ಅಪ್ಪ, ಹಾಸ್ಟೆಲ್‌ಗಳಿಗೆ ಅಕ್ಕಿ-ರಾಗಿ ಮಾಡಿಕೊಡುವ ಅವ್ವ. ಹಟ್ಟಿಯಲ್ಲಿ ಬಾಡಿಗೆ ಮನೆ. ಐವರು ಮಕ್ಕಳಲ್ಲಿ ಕೊನೆಯಾಕೆ ಮುಸಿಯಮ್ಮ. ಅಪ್ಪನ ದುಡಿಮೆ ಹೆಂಡದಂಗಡಿಗೆ; ಅವ್ವನಿಗೆ ಬರೀ ಹೊಡೆತ ಬಡಿತ. ಅವ್ವ ಅವರಿವರು ಕೊಟ್ಟ ಹಳೇ ಸೀರೆ, ಕುಪ್ಪಸಗಳನ್ನು ಕತ್ತರಿಸಿ ಹೊಲೆದು ತೊಡಿಸುವುದು. ಒಂದು ದಿನ ಹುಷಾರಿಲ್ಲದ ಅಪ್ಪ ಆಸ್ಪತ್ರೆ ಸೇರಿ, ಹುಷಾರೂ ಆಗಿ ಅಲ್ಲಿಂದ ಅವನು ಮನೆಗೆ ಬರುವುದಿಲ್ಲ. ಎತ್ತ ಹೋದನೋ ಇಂದಿಗೂ ಸುಳಿವಿಲ್ಲ. ಈಗ ಈ ಕುಟುಂಬದಲ್ಲಿ ಉಳಿದಿರುವುದು ಇವರೊಬ್ಬರೇ.